# ನಮ್ಮೊಳಗೊಬ್ಬ ಒಂಟಿ

**Just living is not enough,**
**One must have sunshine,**
**Freedom and a little flower.**
**H.C. Andersen**



ಅಂದಿನ ಆ ಘಟನೆ ಇಂದಿಗೂ ನನ್ನ ಚಿತ್ತಭಿತ್ತಿಯಲ್ಲಿ ಹಚ್ಚಹಸುರಾಗಿದೆ. ಹೌದು, ಅಂದು ರವಿವಾರ, ಬೆಳಿಗ್ಗೆ ಒಂಬತ್ತು ಗಂಟೆಯ ಸಮಯ. ಆಶ್ವೀಜ ಮಾಸವಾದರೂ ಮೋಡ ಮುಸುಕಿದ ವಾತಾವರಣ. ಕೆಲವೊಮ್ಮೆ ರೇಜಿಗೆ ಹುಟ್ಟಿಸುವ ಜಿಟಿ–ಜಿಟಿ ಮಳೆ. ಕಾವೇರಿ ನೀರು ಸರಬರಾಜು ವ್ಯವಸ್ಥೆಯಡಿಯಲ್ಲಿ ನಮ್ಮ ಲೇಔಟ್ ರಸ್ತೆಗಳನ್ನೆಲ್ಲಾ ಅಗೆದು ಪೈಪ್‌ಗಳನ್ನು ಜೋಡಿಸಿ ಮಣ್ಣು ಮುಚ್ಚಿದ್ದರು. ಪರಿಣಾಮ ಎಲ್ಲೆಲ್ಲೂ ಕೆಂಪು ಮಣ್ಣಿನ ರಾಡಿ. ರಸ್ತೆಯಲ್ಲಿ ಚಿಕ್ಕ–ಪುಟ್ಟ ದಿನ್ನೆ, ಹೊಂಡಗಳು. ನಡೆಯುವಾಗ ಜೀವ ಕೈಯಲ್ಲೇ ಹಿಡಿದು ಸಾಗಬೇಕಾದ ಪರಿಸ್ಥಿತಿ. ಅಭಿವೃದ್ಧಿ ಬೇಕೆಂದರೆ ಅಧ್ವಾನವನ್ನು ಸಹಿಸಿಕೊಳ್ಳಲೇಬೇಕು. ಕೈಯಲ್ಲಿ ಚೀಲ, ಛತ್ರಿ ಹಿಡಿದು ತರಕಾರಿ ತರಲು ಹೊರಟಿದ್ದೆ. ಅದು ವಿ.ವಿ. ಕಾಂಪ್ಲೆಕ್ಸ್ ಸರ್ಕಲ್. ನಾಲ್ಕು ರಸ್ತೆ ಕೂಡುವ ಸ್ಥಳ. ಯಾವಾಗಲೂ ವಿಪರೀತ ಟ್ರಾಫಿಕ್. ಸಿಗ್ನಲ್ ಇಲ್ಲ. ಟ್ರಾಫಿಕ್ ಪೊಲೀಸರು ಮೊದಲೇ ಇಲ್ಲ. ಮತ್ತೆ ಇಂತಹ ದೃಶ್ಯಗಳು ಬೆಂಗಳೂರಿನಲ್ಲಿ ಅಪರೂಪವೇನಲ್ಲ. ಪಕ್ಕದ ಸಿಟಿಪರ್ಲ್ ಮಾರ್ಕೆಟ್ ಬಳಿಯ ಕಲ್ಲುಬೆಂಚಿನ ಮೇಲೆ ಬೆಳಿಗ್ಗೆಯಿಂದ ಸಂಜೆಯವರೆಗೂ ಕೂತು ಪೇರಲೆ ಹಣ್ಣು ಮಾರುವ ಅಜಮಾಸ್ ಎಪ್ಪತ್ತರಂಚಿನ ಚಿನ್ನುಸ್ವಾಮಿ ನನಗೆ ಸುಪರಿಚಿತ. ಯಾವಾಗಲೂ ಅವನಿಂದಲೇ ನಾನು ಹಣ್ಣುಗಳನ್ನು ಕೊಳ್ಳುವದು. ಅಂದು ನಾನು ಸರ್ಕಲ್